ಪದಬಂಧ




ಎಡದಿಂದ ಬಲಕ್ಕೆ:

1. ಭಜನೆಗೆ ಸೇರಿದ್ದವರೆಲ್ಲ ಸುಸಂಸ್ಕೃತ ಮನುಷ್ಯರು (4)
3. ಕೆಲಸವೇನೂ ಬಹಳವಿಲ್ಲ. ಆದರೂ ಏಕಿಷ್ಟು ತಡ? (3)
4. ತವರನ್ನೇ ನಿಂದಿಸುವುದು– ಇದೆಂಥ ನಡವಳಿಕೆ? (3)
6. ವಿಚಾರವನ್ನು ಬೆಳಕಿಗೆ ತಂದದ್ದು ಅಡವಿ ಪ್ರಾಣಿ (4)
7. ರಾಶಿ ರಾಶಿ ಪತ್ರ ಬರೆದವ ಮುನಿಯ ಮಗ ಹೌದೇ? (4)
9. ಮರೆಯುವಂತೆಯೇ ಇಲ್ಲ ಬಿಡಿ ರಘುನಂದನನ ಹೆಸರು (4)
12. ವ್ಯಾಪಾರಿಯ ವೇಷ ಧರಿಸಿ ಮೈಮರೆತನೇ? (4)
14. ತಾವರೆ ತರುವ ಕೆಲಸ ನಡೆಯಲಿ ಶೀಘ್ರವಾಗಿ (3)
15. ಮಕರ ಸಂಕ್ರಮಣದಂದು ಮುನ್ನಡೆ ಹೇಗೆ? (3)
16. ರಾಧಾ ಮಾಧವರಿಗಾಗಿ ಈ ಬಹು ಸುಂದರ ಮನೆ (4)

ಮೇಲಿಂದ ಕೆಳಕ್ಕೆ:

1. ಬಕಾಸುರನ ನೆನಪು ಮಾಡಿದ್ದು ಸೋಪು (4)
2. ನಾವೆಯನ್ನೇರಿ ರಕ್ಷಿಸಿದವಳು ಹೊಸ ಮಹಿಳೆ (4)
3. ಮನವಿ ಸಲ್ಲಿಸಿ ಬರಲು ಹಾರುವ ವಾಹನವೇ? (3)
5. ಪನ್ನೇರಳೆಯನ್ನು ತಿಂದದ್ದೇ ಸ್ಮರಣೆ (3)
6. ಎಷ್ಟು ಸುಂದರವಲ್ಲವೇ ನಮ್ಮ ಭೂಮಿ! (4)
8. ತಾಪತ್ರಯದ ಬಿಸಿ ಹೋಗಿಸಿ ಉಳಿದಂಥದೇ ಹತ್ತು ಬೆರೆಸಿದರೆ ಹದಿಮೂರು (4)
10. ಮೂರೂ ಹೊತ್ತು ಮಾತಿಗೇ ಪ್ರಾಮುಖ್ಯ (3)
11. ಮತ್ತೇನಿದೆ ವ್ಯತ್ಯಾಸ? ಪಂಥ ಬದಲಿಸಿದರು ತಾನೇ? (4)
12. ಪರಮವೀರನ ಶೌರ್ಯ ಹೀಗೆಯೇ (4)
13. ವರ್ಣನಾರೀತಿ ಏನೇ ಇರಲಿ, ಅವನೇ ಸಾಗರರಾಜ (3)

### ಪದಬಂಧ 14-02-2013 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅನುಗ್ರಹ; 3. ಧವಳ; 4. ರಭಸ; 6. ಕಡಿವಾಣ; 7. ಸಕಲ; 9. ಉಸುಕು; 11. ರಜಾಯಿ; 13. ಸುತಲ; 15. ತಾರಾಬಲ; 17. ಕಡಾರ; 18. ಲವಂಗ; 19. ಕಡೇಮನೆ.

ಮೇಲಿಂದ ಕೆಳಕ್ಕೆ:

1. ಅಳಕ; 2. ಹರಣ; 3. ಧನಿಕ; 5. ಸಲೀಸು; 7. ಸಮೀರ; 8. ಲಡಾಯಿ; 9. ಉಣಿಸು; 10. ಕುಶಲ; 12. ಜಾತಕ; 14. ತರಂಗ; 15. ತಾರಕ; 16. ಲಲನೆ.

# ಪ್ರಶ್ನಾಂಕಣ

## 'ನಿಯಾಂಡರ್‌ಥಾಲ್' ಯಾರು?

ಅದು ನಮ್ಮ ಒಂದು ಪೂರ್ವಜ ಪ್ರಭೇದ. ಅದರ ವಾಸ್ತವ ವೈಜ್ಞಾನಿಕ ಹೆಸರು 'ಹೋಮೋ ನಿಯಾಂಡರ್‌ಥಾಲೆನ್ಸಿಕ್'. 'ಹೋಮೊ ಸೆಪಿಯನ್'ರಾದ ನಮ್ಮ ಪ್ರಭೇದಕ್ಕೆ ಈ ನಮ್ಮ ಪೂರ್ವಜ ಪ್ರಭೇದ ಎಷ್ಟೊಂದು ಹತ್ತಿರದ್ದೆಂದರೆ ಬಹುಜನ ಮಾನವ ಶಾಸ್ತ್ರಜ್ಞರು ನಿಯಾಂಡರ್‌ಥಾಲ್ ಮನುಷ್ಯ ಪ್ರತ್ಯೇಕ ಪ್ರಭೇದವೇ ಅಲ್ಲ, ಅದು ಹೋಮೊ ಸೆಪಿಯನ್‌ರದೇ ಒಂದು ಉಪಪ್ರಭೇದ ಅಷ್ಟೇ ಎಂದೇ ಪ್ರತಿಪಾದಿಸಿದ್ದಾರೆ. ಆ ಪ್ರಕಾರ ಈ ಪೂರ್ವಜರ ಪೂರ್ಣ ವೈಜ್ಞಾನಿಕ ಹೆಸರು 'ಹೋಮೊ ಸೆಪಿಯನ್ಸ್ ನಿಯಾಂಡರ್‌ಥಾಲೆನ್ಸಿಸ್.'

ಅದೆಲ್ಲ ಏನೇ ಇರಲಿ, ನಿಯಾಂಡರ್‌ಥಾಲ್ ಮನುಷ್ಯರು ಧರೆಯಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಬಾಳುವೆ ನಡೆಸಿದ್ದು ಈಗ್ಗೆ ಸುಮಾರು ನಲವತ್ತು ಸಾವಿರ ವರ್ಷಗಳಿಂದ ಮೂರು ಲಕ್ಷ ವರ್ಷಗಳ ಹಿಂದಿನ ಅವಧಿಯಲ್ಲಿ. ಪ್ರಮುಖವಾಗಿ ಈಗಿನ ಯೂರೋಪ್ ಖಂಡದ ಪ್ರದೇಶದಲ್ಲಿ ಹರಡಿದ ಈ ನಮ್ಮ ಪೂರ್ವಜರ ಇಡೀ ಜನಸಂಖ್ಯೆ ಎಂದೂ ಗರಿಷ್ಠ ಹತ್ತುಸಾವಿರ ಮೀರಿರಲಿಲ್ಲ. ಆ ಮನುಷ್ಯರು ಅತ್ಯಂತ ಹೆಚ್ಚೆಂದರೆ ಮೂವತ್ತನ್ನು ಮೀರಿದ ಸಂಖ್ಯೆಗಳಲ್ಲಿ ಪ್ರತ್ಯೇಕ ಗುಂಪುಗಳಲ್ಲಿ ಅಲೆಮಾರಿ ಜೀವನ ನಡೆಸಿದ್ದರು.

ನಿಯಾಂಡರ್‌ಥಾಲ್‌ರದು ನಮಗಿಂತ ಕುಳ್ಳಾದ ಶರೀರ. ಆದರೆ ಅವರ



ದೇಹ ಹೆಚ್ಚು ಸ್ಥೂಲ, ಹೆಚ್ಚು ಶಕ್ತಿಯುತ; ತುಸು ಹಿಂದಕ್ಕೆ ಚಾಚಿದ ತಲೆಬುರುಡೆ, ಅಗಲವಾದ ಮೂಗು. ಶರೀರ ಗಾತ್ರಕ್ಕೆ ಹೋಲಿಸಿದರೆ ಆಧುನಿಕ ಮನುಷ್ಯರಿಗಿಂತ ದೊಡ್ಡ ಮೆದುಳು– ಇವು ಅವರ ವಿಶಿಷ್ಟ ದೇಹ ಲಕ್ಷಣಗಳು.

ಬುದ್ಧಿವಂತರಾಗಿದ್ದ ಆ ಮನುಷ್ಯರು ಬೆಂಕಿಯ ಬಳಕೆ ತಿಳಿದಿದ್ದರು. ಚಳಿಯಿಂದ ರಕ್ಷಿಸಿಕೊಳ್ಳಲು ಪ್ರಾಣಿಗಳ ಚರ್ಮವನ್ನು ಉಡುವ-ಹೊದೆವ ಕ್ರಮ ಕಲಿತಿದ್ದರು. ನಾನಾ ಆಯುಧ-ಸಾಧನಗಳನ್ನು ಮರದ ಈಟಿ, ವಿಧವಿಧ ಶಿಲಾಯುಧಗಳು ಇತ್ಯಾದಿ– ತಯಾರಿಸುತ್ತಿದ್ದರು. ಪೂರ್ವಯೋಜಿತ ತಂತ್ರದೊಡನೆ ಗುಂಪಾಗಿ ಭಾರೀ ಪ್ರಾಣಿಗಳನ್ನೂ ಬೇಟೆಯಾಡುತ್ತಿದ್ದರು. ಆ ಜನ ಸಾಮಾನ್ಯವಾಗಿ ಗುಹೆಗಳಲ್ಲಿ ವಾಸಿಸುತ್ತಿದ್ದರಾದರೂ ಕೊಂಬೆ, ಕಡ್ಡಿ, ಪ್ರಾಣಿ ಚರ್ಮಗಳನ್ನು ಬಳಸಿ 'ಗುಡಾರ' ನಿರ್ಮಿಸುವುದನ್ನೂ ಕಲಿತಿದ್ದರು. ಮೃತರಿಗೆ 'ಅಂತ್ಯ ಸಂಸ್ಕಾರ' ಮಾಡುವ ನಾಗರಿಕ ಕ್ರಮ ನಿಯಾಂಡರ್‌ಥಾಲ್‌ರಿಂದಲೇ ಆರಂಭವಾಯಿತು; ಮೃತರನ್ನು ನೆಲ ತೋಡಿ ಮಲಗಿಸಿ ಹೂಗಳನ್ನು ಹಾಕಿ ಮಣ್ಣು ಮುಚ್ಚುವ ಪರಿಪಾಠ ಅದು. ಯಾವುದಾದರೂ ಒಂದು ರೀತಿಯ 'ಭಾಷಾಕ್ರಮ'ವನ್ನೂ ಆ ಜನ ಹೊಂದಿದ್ದಿರಲೇಬೇಕು ಎಂದೂ ವಿದ್ವಾಂಸರು ತರ್ಕಿಸಿದ್ದಾರೆ. ಏನಾದರೇನು? ತಮ್ಮ ಅಸ್ತಿತ್ವದ ಅವಧಿಯ ಬಹುಕಾಲವನ್ನು 'ಹಿಮಯುಗ'ದಲ್ಲೇ ಕಳೆದ ಆ ಜನ ಅತಿ ಚಳಿಯ, ಆಹಾರದ ಅಭಾವದ, ತೀರ ದುಸ್ತರ ಪರಿಸ್ಥಿತಿಯಲ್ಲೇ ಬದುಕಿದ್ದರಾದ್ದರಿಂದಲೇ ಅವರ ಸರಾಸರಿ ಆಯುಷ್ಯ ಮೂವತ್ತು ವರ್ಷ ಮೀರಿರಲಿಲ್ಲ.

■ ಎನ್. ವಾಸುದೇವ್